THE BOOK WAS DRENCHED

ಹಾದಿಯ ಹೊತ್ತಿಗೆ ೧

ಶರ-ಪಂಜರ

ಬರೆದವರು:

ಶ್ರೀರಂಗರು

ಕನ್ನಡ ಸರಸ್ವತಿ ಭಾಂಡಾಗಾರ

— ಧಾರವಾಡ —

ಬೆಲೆ ೦-೩-೦

ಪಾತ್ರವಿವರ

ಮುದುಕ

ತರುಣಿ

ಯುವಕ

ಹೆಂಗಸು

ಗೃಹಸ್ಥ

...

ವಿ. **ಸೂ** — ಮುದುಕನೊಬ್ಬನೆ ಜೀವದಿಂದಿದ್ದಾನೆ. ಮಿಕ್ಕವರೆಲ್ಲ ಭೂತಗಳು.

ರಂಗಸೂಚನೆ

[ಮುಂಜಾನಿನ ೧೦ ಗಂಟೆಯ ಸಮಯ. ಒಬ್ಬ ಮುದುಕ ಪೆನ್‌ಶನರನ ಮನೆಯಲ್ಲಿಯ ಒಂದು ಕೋಣೆ. ರಂಗಭೂಮಿಯ ಮಧ್ಯದಲ್ಲಿ ಒಂದು ಕುರ್ಚಿ. ಆ ಕುರ್ಚಿಯ (ಪ್ರೇಕ್ಷಕರ ಬಲ) ಬದಿಗೆ ಒಂದು ಮೇಜು; ಆ ಮೇಜಿನಾಚೆಗೆ, ಗೋಡೆಯ ಸಮೀಪ, ಒಂದು ಗ್ರಂಥಫಲಕ (book-stand); ಮೇಜಿನ ಮೇಲೆ ಕಾಣುವ ಗಡಿಯಾರದ 'ಟಿಕ್, ಟಿಕ್' ಸಪ್ಪು ಒಂದೇ ಸವನೆ ಕೇಳಬರುತ್ತಿದೆ; ಅಷ್ಟೊಂದು ಶಾಂತತೆ ಪಸರಿದೆ ಕೋಣೆಯಲ್ಲಿ. ಕಿಟಿಕಿಗಳಿಲ್ಲ-ಬಾಗಿಲು ಇರಲೇಬೇಕು, ಆದರೆ ಕಾಣುವಂತಿಲ್ಲ; ಅಷ್ಟೊಂದು ಕತ್ತಲೆ—ನಡೆಯುವಾಗ ಎಡವಿ ಬೀಳುವಷ್ಟು - ಗೋಡೆಗಳಿಗೂ ಮೂಲೆ ಮೂಲೆಗಳಿಗೂ ಹಬ್ಬಿದೆ. ಮಾಳಿಗೆಯಿಂದ ನೇರವಾಗಿ ಸೂಸುವ ಪ್ರಕಾಶವು ಕುರ್ಚಿಯ ಮೇಲೂ ಮೇಜಿನ ಕೊನೆಯ ಮೇಲೂ ಬಿದ್ದಿದೆ. ಈ ಪ್ರಕಾಶದಲ್ಲಿ ಕುರ್ಚಿಯ ಮೇಲೆ ಮುದುಕನು ಕಾಣುವನು. ಆತನ ವಯಸ್ಸು ಎಂಭತ್ತರಷ್ಟಿರಬಹುದು. ತಲೆಗೆ ರುಮಾಲು, ಮೈಮೇಲೆ ಕೋಟು -ಉಪ್ಪರಣೆ, ಕೈಯಲ್ಲಿ ಒಂದು ಬಡಿಗೆ, ಈ ಅವಸ್ಥೆಯಲ್ಲೂ ಮುದುಕನಿಗೆ ಕುಳಿತಲ್ಲಿಯೆ ನಿದ್ರೆ ಹತ್ತಿದೆ. ಅರೆತೆರೆದ ಬಾಯಿ, ಕಳೆಯಿಲ್ಲದ ಮುಖ, ಎಲುಬುಗಟ್ಟಿ ದೇಹ —ಮುದುಕನು ಜೀವದಿಂದಿರಬಹುದೆ ಎಂದು ಸಂಶಯ ತರುವಂತಿದೆ. ಇಷ್ಟರಲ್ಲಿ ಕೈಯೊಳಗಿನ ಬಡಿಗೆ ಜಾರಿ ನೆಲಕ್ಕೆ ಬೀಳುವುದು; ಆ ಸಪ್ಪಿಗೆ ಮುದುಕನು ತಟ್ಟನೆ ಕಣ್ದೆರೆಯುವನು. ಗಾಬರಿಯಿಂದ ಅತ್ತಿತ್ತ ನೋಡುವನು, ಕಣ್ಣು ಸರಿಯಾಗಿ ಕಾಣುವುದೆ ಇಲ್ಲ; ಏಳಬೇಕೆಂದರೆ ಕಾಲು ಎತ್ತದಂತಾಗಿದೆ. ಕೊನೆಗೆ ರುಮಾಲನ್ನು ಸರಿಯಾಗಿರಿಸಿಕೊಂಡು ಉಪ್ಪರಣೆಯನ್ನು ಸಾವರಿಸುತ್ತ]

ಪಾತ್ರವಿವರ

ಮುದುಕ

ತರುಣಿ

ಯುವಕ

ಹೆಂಗಸು

ಗೃಹಸ್ಥ

ಸಿ. ಸೂ:— ಮುದುಕನೊಬ್ಬನೆ ಜೀವದಿಂದಿದ್ದಾನೆ. ಮಿಕ್ಕವರೆಲ್ಲ ಭೂತಗಳು.

ರಂಗಸೂಚನೆ

[ಮುಂಜಾವಿನ ೧೦ ಗಂಟೆಯ ಸಮಯ. ಒಬ್ಬ ಮುದುಕ ಪೆನ್‌ಶನರನ ಮನೆಯಲ್ಲಿಯ ಒಂದು ಕೋಣೆ. ರಂಗಭೂಮಿಯ ಮಧ್ಯದಲ್ಲಿ ಒಂದು ಕುರ್ಚಿ. ಆ ಕುರ್ಚಿಯ (ಪ್ರೇಕ್ಷಕರ ಬಲ) ಬದಿಗೆ ಒಂದು ಮೇಜು; ಆ ಮೇಜಿನಾಚೆಗೆ, ಗೋಡೆಯ ಸಮೀಪ, ಒಂದು ಗ್ರಂಥಫಲಕ (book-stand); ಮೇಜಿನ ಮೇಲೆ ಕಾಣುವ ಗಡಿಯಾರದ 'ಟಿಕ್, ಟಿಕ್' ಸದ್ದು ಒಂದೇ ಸವನೆ ಕೇಳಬರುತ್ತಿದೆ; ಅಷ್ಟೊಂದು ಶಾಂತತೆ ಹರಡಿದೆ ಕೋಣೆಯಲ್ಲಿ. ಕಿಟಿಕಿಗಳಿಲ್ಲ-ಬಾಗಿಲು ಇರಲೇಬೇಕು, ಆದರೆ ಕಾಣುವಂತಿಲ್ಲ; ಅಷ್ಟೊಂದು ಕತ್ತಲೆ—ನಡೆಯುವಾಗ ಎಡವಿ ಬೀಳುವಷ್ಟು — ಗೋಡೆಗಳಿಗೂ ಮೂಲೆ ಮೂಲೆಗಳಿಗೂ ಹಬ್ಬಿದೆ. ಮಾಳಿಗೆಯಿಂದ ಮಂದವಾಗಿ ಸೂಸುವ ಪ್ರಕಾಶವು ಕುರ್ಚಿಯ ಮೇಲೂ ಮೇಜಿನ ಕೊನೆಯ ಮೇಲೂ ಬಿದ್ದಿದೆ. ಈ ಪ್ರಕಾಶದಲ್ಲಿ ಕುರ್ಚಿಯ ಮೇಲೆ ಮುದುಕನು ಕಾಣುವನು. ಅವನ ವಯಸ್ಸು ಎಂಭತ್ತರಷ್ಟಿರಬಹುದು. ತಲೆಗೆ ರುಮಾಲು, ಮೈಮೇಲೆ ಕೋಟು—ಉಪ್ಪರಣೆ, ಕೈಯಲ್ಲಿ ಒಂದು ಬಡಿಗೆ, ಈ ಅವಸ್ಥೆಯಲ್ಲೂ ಮುದುಕನಿಗೆ ಕುಳಿತಲ್ಲಿಯೆ ನಿದ್ರೆ ಹತ್ತಿದೆ. ಅರೆತೆರೆದ ಬಾಯಿ, ಕಳೆಯಿಲ್ಲದ ಮುಖ, ಎಲುಬುಗಟ್ಟಿ ದೇಹ—ಮುದುಕನು ಜೀವದಿಂದಿರಬಹುದೆ ಎಂದು ಸಂಶಯ ತರುವಂತಿದೆ. ಇಷ್ಟರಲ್ಲಿ ಕೈಯೊಳಗಿನ ಬಡಿಗೆ ಜಾರಿ ನೆಲಕ್ಕೆ ಬೀಳುವುದು; ಆ ಸದ್ದಿಗೆ ಮುದುಕನು ತಟ್ಟನೆ ಕಣ್ದೆರೆಯುವನು. ಗಾಬರಿಯಿಂದ ಅತ್ತಿತ್ತ ನೋಡುವನು, ಕಣ್ಣು ಸರಿಯಾಗಿ ಕಾಣುವುದೆ ಇಲ್ಲ; ಏಳಬೇಕೆಂದರೆ ಕಾಲು ಎತ್ತದಂತಾಗಿವೆ. ಕೊನೆಗೆ ರುಮಾಲನ್ನು ಸರಿಯಾಗಿರಿಸಿಕೊಂಡು ಉಪ್ಪರಣೆಯನ್ನು ಸಾವರಿಸುತ್ತ ——]

ಮುದುಕ:— (ಕುಳಿತಲ್ಲಿಯೆ ಕಳವಳದಿಂದ) ಅಯ್ಯೋ!.... ಏ ಹುಸೇನಿ, ಇಬ್ರಾಹಿಮ್, ಫ್ರ್ಯಾನ್, ಘೋಕ್ರಾ? ಯಾರಿದ್ದೀರಿ ಅಲ್ಲಿ ಹೊರಗೆ? (ನರಳುತ್ತ) ಏನು ಮಾಡಲಿ? ಆಫೀಸಿಗೆ ಹೋಗಬೇಕಲ್ಲ? ಹತ್ತು ಗಂಟೆ ಆಯಿತೊ ಏನೊ!....ಆ....ಆಫೀಸಿನ ಗಂಟೆ ನನ್ನ ಎದೆಯೊಳಗೆ ಬಾರಿಸಿದ ಹಾಗಾಯ್ತು!....ಆಫೀಸಿಗೆ ತಡ ಆದರೆ ದೊಡ್ಡ ಸಾಹೇಬರು ಏನಂತಾರೊ ಏನೊ! ನನ್ನ ಸೀನಿಯರ ಸತ್ತು ಹೋದ-ಅವನ ಜಾಗೆಗೆ ಪ್ರಯತ್ನ ಮಾಡುವವ ನಾನು—ತಡ ಆದರೆ— (ಒಮ್ಮೆಲೆ ತಡೆದು ಸಿಟ್ಟಿನಿಂದ) ಏನೆ—ಏನ್ಮಾಡ್ತಾ ಇದ್ದೀಯೆ ನೀನು? ಹೇಳ್ಬಾರದೆ ಹುಸೇನಿಗೆ ಗಾಡಿತಕ್ಕೊಂಡು ಬಾ ಅಂತ?..ಬಂದೆಯಾ? ನನ್ನ ಬೂಟ್ಸು ತಕ್ಕೊಂಡು ಬಾ....ಹಾಳಾಯ್ತು ನಿನ್ನ ಮಡಿ! ಒಮ್ಮೆ ನಾನು ಸೀನಿಯರ ಆಫೀಸರ ಆದೆ ಅಂದರೆ ಬೇಕಾದಷ್ಟು ಮಡಿ ಮಾಡುವೆಯಂತೆ....ಅಲ್ಲಿಯ ವರೆಗೆ ಸಾಹೇಬ-ಮಡೆಮ್ಮರ ಶೇಕ್ ಹ್ಯಾಂಡ್ ಮಾಡಬೇಕಲ್ಲ?....ಮುಂದೆ ಬೇಕಾದರೆ ಮಡಿ ಮಾಡಲಿಕ್ಕೆ ಒಬ್ಬ ಸ್ಪೆಶಲ್ ಸರ್ವಂಟನ್ನೆ ಇಟ್ಟುಬಿಡೋಣ!.... (ನಗೆಮೊಗದಿಂದ) ನಿನ್ನೆ ಸಾಹೇಬರು ಏನಂದರು ಅಂತೀಯೆ? 'ನಾನು ಇನ್ನೊಂದೆರಡು ವರ್ಷಕ್ಕೆ ವಿಲಾಯತಿಗೆ ಹೋಗತೀನಿ ರಜೆಯ ಮೇಲೆ—ಅದೊಂದು ತಿಂಗಳಿಗಾಗಿ ನಿನ್ನ ಹೆಸರನ್ನೆ ಕೊಡತೀನಿ ಆಕ್ಟ್ ಮಾಡಲಿಕ್ಕೆ' ಅಂದರು! (ಸೌಮ್ಯವಾಗಿ) ಬೂಟ್ಸು ತಂದೆಯಾ? (ಎರಡೂ ಕಾಲ್ಗಳನ್ನು ಮುಂದೆ ಸರಿಸಲು ಮುಗ್ಗರಿಸುವನು. ಕೈಬಡಿಗೆಯನ್ನು ಗಟ್ಟಿಯಾಗಿ ಹಿಡಿದು ಸಿಟ್ಟಿನಿಂದ) ಬೂಟ್ಸು—ಅಂದೆ! (ತೇಕುತ್ತ ಒಂದು ನಿಮಿಷ ಹಣೆ ಹಿಡಿದುಕೊಂಡು) ಎಲ್ಲಿಯೋ ಹೋಗಬೇಕಾಗಿದೆ ನನಗೆ! ಎಲ್ಲಿ? (ಕಳವಳದಿಂದ) ಅಯ್ಯೋ—ಏನ್ಮಾಡಲಿ? ಎಲ್ಲಿ ಹೋಗಬೇಕಾಗಿದೆ, ಅಂತ ಹೇಳುವವರು ಯಾರೂ ಇಲ್ಲವೆ? (ಕೈ ನಡುಗಿ ಬಡಿಗೆ ಬಿಳುವುದು) (ಒಮ್ಮೆಲೆ) ಹಂ—ಸ್ಮರಣೆಗೆ ಬಂದಿತು. ಡೈರೆಕ್ಟರ್ಸ ಮೀಟಿಂಗು ಇದೆ ಈ ಹೊತ್ತು!....ಅಂತೂ ಸ್ಮರಣೆಗೆ ಬಂದಿತಲ್ಲ!.... ನಾನು ಮುದುಕನಂತೆ! (ಎಂದು ಬಡಿಗೆಯನ್ನು ಎತ್ತಲು ಆಯಾಸದಿಂದ ಬಾಗುವನು. ಬಡಿಗೆ ಕೈಗೆ ದೊರೆತರೂ, ಬಾಗಿದ ಬೆನ್ನು ಬೇಗ ಏಳುವುದಿಲ್ಲ. ಎಡ

ಗೈಯಿಂದ ಮೇಜಿನ ಮೇಲೂ ಬಲಗೈಯಿಂದ ಬದಿಗೆಯ ಮೇಲೂ ಭಾರವನ್ನಿಟ್ಟು ಕೊನೆಗೆ ಆಯಾಸದಿಂದ ಕುಳಿತುಕೊಳ್ಳುವನು. ತೇಕುವುದು ಕಡಿಮೆಯಾದ ಮೇಲೆ) ಬೆನ್ನು ಎತ್ತದಿದ್ದರೂ ಬುದ್ಧಿ ಬತ್ತಿಲ್ಲವಲ್ಲ ಇನ್ನೂ! ಅಂತೇ ನನ್ನನ್ನ ಬಿಟ್ಟರೆ ಯಾರಿಗೂ ಸಾಗೋದೇ ಇಲ್ಲ. ಮಾಡೋದೇನು? ದೇಹದಲ್ಲಿ ಉಸಿರಿರುವ ವರೆಗೆ (ಆಯಾಸದಿಂದ ಏಳುವಾಗ ಉಸಿರು ಸಾಲದೆ) ದೇ-ಹ-ದ-ಹ-ಲ್ಲಿ-- (ತಡೆದು) ಆಫೀಸು-ಅಲ್ಲ-ಡೈರೆಕ್ಟರ್ಸ ಮೀಟಿಂಗ-(ಒಮ್ಮೆಲೆ ಕಳವಳದಿಂದ) ಯಾವ ಡೈರೆಕ್ಟರ್ಸ? (ಸಂತಾಪದಿಂದ) ಥೂ-ಇದರ ಹಾಳಾಗಲಿ! ಬೇಡ ಅಂದರೂ ನೂರು ಕಂಪನಿಗಳ ಡೈರೆಕ್ಟರ ಮಾಡಿದರು ನನ್ನ— (ಅಳುಮೋರೆಯಿಂದ) ಈಗ ಯಾವ ಕಂಪನಿಯ ಡೈರೆಕ್ಟರ್ಸ ಮೀಟಿಂಗು ಅಂತ— (ಒಮ್ಮೆಲೆ ಬೆದರಿದಂತೆ) ಏನು ಆಫೀಸಿಗೊ?.... (ಹಣೆ ಹಿಡಿದು) ರಾಮ! ರಾಮಾ! ನಿಂತ. ನಿಂತಲ್ಲಿಯೆ ಜೀವ ಹೋಗಬಾರ್- (ಒಮ್ಮೆಲೆ ಹಲ್ಲಿಲ್ಲದ ಬಾಯಿಯಿಂದ, ಉಸಿರಿಲ್ಲದ ಗಂಟಲಿನಿಂದ ಮುಪ್ಪಿನ ಪೊಳ್ಳುನಗೆ ನಕ್ಕು) ಜೀವ ಅಂದ ಕೂಡಲೆ ನೆನಪಾಯಿತು, ಲೈಫ್ ಇನ್ಶ್ಯೂರನ್ಸ—ಜೀವ ವಿಮಾ ಕಂಪನಿಯ ಡೈರೆಕ್ಟರ್ಸ್ ಮೀಟಿಂಗು ಈ ಹೊತ್ತು!....(ಒಮ್ಮೆಲೆ ಕುರ್ಚಿಯಲ್ಲಿ ಬಿದ್ದು) ಆದರೆ ನಾನು ಹೋಗೋದು ಹೇಗೆ? (ನರಳುತ್ತ) ಏ-ಬಂದೆಯೇನೆ? ನನಗೆ ಎಲ್ಲಿಯೊ ಹೋಗಬೇಕಾಗಿದೆ, ತಿಳಿಯಿತೇನು? ನಿನಗೂ ಮರೆಯಿತೊ ಏನ್ಮಣ್ಣೊ? ಮುಪ್ಪಿನಲ್ಲಿ ಉಪಯೋಗ ಬೀಳಲಿ ಅಂತ ಚಿಕ್ಕ ಹೆಂಡತೀನ್ನ ಮಾಡಿಕೊಂಡರೆ-....ನನ್ನ ಬೂಟ್ಸು- (ಹಣೆ ಹಿಡಿದು ಕೊಳ್ಳುವನು) ಬಂದೆಯೇನೆ ಬೂಟ್ಸು ತಕ್ಕೊಂಡು?

[ಅವನ ಬಲಬದಿಯ ಮೂಲೆಯಲ್ಲಿ ತರುಣಿಯ ಮೂರ್ತಿಯೊಂದು ಕಾಣುವುದು]

ತರುಣಿ:— ಬಂದೀನಿ—ಇಲ್ಲಿಯೆ ನಿಂತುಕೊಂಡೀನಿ.

ಮುದುಕ:— (ಸಮಾಧಾನದ ದನಿಯಲ್ಲಿ) ಬಂದೆಯಾ? ಅಲ್ಲೇ, ನನಗೆ ಆಫೀಸಿಗೆ ಹೋಗಬೇಕಾಗಿದೆ, ನೀನು ಎಲ್ಲಿ ಇದ್ದಿ?

ತರುಣಿ:— (ಆಶ್ಚರ್ಯದ ದನಿಯಲ್ಲಿ) ಆಫೀಸಿಗೆ? ಇನ್ನೂ ಆಫೀಸಿಗೆ ಹೋಗೋದರೊಳಗಿಯೆ ಇದ್ದೀರಾ ನೀವು?

ಮುದುಕ:— (ಹಟಮಾರಿ ಹುಡುಗನಂತೆ) ಹೋಗೋದರೊಳಗೆಯೆ-ಅಂದರೆ? ಏನು ಮಾಡಲಿ ನಾನು? ಹುಸೇನಿ ಇಲ್ಲ, ಇಬ್ರಾಹಿಮ್ ಇಲ್ಲ, ಗಾಡಿ ಇಲ್ಲ, ನೀನು ಇಲ್ಲ——————ಎಲ್ಲಿ ಹೋಗಬೇಕನ್ನೋದೂ ಗೊತ್ತಿಲ್ಲ———ನಿನಗಾದರೂ ಗೊತ್ತಿದೆಯೇನು ಅಂದರೆ ನೀನೂ ಇಲ್ಲ!

ತರುಣಿ:— (ನಡುವೆಯೆ) ನಾವು ಯಾರೂ ಇಲ್ಲ, ನನಗೆ ಗೊತ್ತಿದೆ; ಅದಕ್ಕೇ-

ಮುದುಕ:— (ಚಕಿತನಾಗಿ) ನೀವು ಯಾರೂ ಇಲ್ಲ? ಇಲ್ಲ ಅಂದರೆ ಎಲ್ಲಿ ಹೋಗಿದ್ದಿರಿ ಅಂತ ಕೇಳ್ತೀನಿ.

ತರುಣಿ:— (ಕನಿಕರದಿಂದ) ಅಯ್ಯಯ್ಯ! ಬುದ್ಧೀನೇ ಹೋಗಿದೆಯೊ ಏನೊ? ನಾನು ಸತ್ತೀಸಿ ಅಂಬೋದನ್ನ ಮರತಿರೇನು?

ಮುದುಕ:— ಸತ್— (ಒಮ್ಮೆಲೆ ಗಾಬರಿಯಿಂದ) ಯಾರು ನೀನು?

ತರುಣಿ:— (ನಗೆಯಿಂದ) ಯಾರು ಅಂದರೆ? ನಿಮ್ಮ ಹೆಂಡತಿ.

ಮುದುಕ:— (ಆತುರತೆಯಿಂದ) ನನ್ನ ಹೆಂಡತಿ ಇದ್ದಿರಬಹುದು— ಆದರೆ ಯಾವ ಹೆಂಡತಿ? ಅಂದರೆ ಎಷ್ಟನೆಯ ಹೆಂಡತಿ?

ತರುಣಿ:— ನನಗೇನು ಗೊತ್ತು ನನ್ನ ಮುಂಚೆ, ನನ್ನ ಮೇಲೆ ನೀವು ಎಷ್ಟು ಮದುವೆ ಮಾಡಿಕೊಂಡಿರಿ ಅಂಬೋದು?

ಮುದುಕ:— (ಯೋಚನೆಯಲ್ಲಿ) ಎಷ್ಟು ಮದುವೆ ಅಂದು ಮಾಡೋದೇನು ಎಲ್ಲರೂ ಸತ್ತ ಮೇಲೆ?

ತರುಣಿ:— ಅದಕ್ಕೇ ಕೇಳಿದೆ, ಇಷ್ಟುಮಂದಿ ನಿಮ್ಮ ಕಣ್ಮುಂದ ಸತ್ತು ಹೋದರೂ ನೀವು ಮಾತ್ರ ಇನ್ನೂ ಆಫೀಸಿಗೆ ಹೋಗೋದರೊಳ ಗೆಯೆ ಇದ್ದೀರಾ ಅಂತ.

ಮುದುಕ:— (ಇನ್ನೂ ಯೋಚನೆಯಲ್ಲಿಯೆ) ಸತ್ತರು! ಎಲ್ಲರೂ ಸತ್ತು ಹೋದರು! ನೀನು ಸತ್ತಿರುವೆ! ಅಂದರೆ ನಾನು — ನಾನು ಜೀವ ದಿಂದಿರುವೆ ಅಂದ ಹಾಗಾಯಿತಲ್ಲ!

ತರುಣಿ:— ನನಗೇನು ಗೊತ್ತು ನೀವು ಏನಿದ್ದೀರಿ ಅಂತ?

ಮುದುಕ:— (ಹಟದಿಂದ) ಇಲ್ಲ - ನಾನು ಜೀವದಿಂದಿರಲೇಬೇಕು! (ನಗೆಯಿಂದ) ಯಾಕೆಂದರೆ ನಾನು ಆಫೀಸಿಗೆ ಹೊರಟು ನಿಂತಿರುವೆ! ಹಹ!
(ನಗೆ ತಡೆಯದೆ ಕೆಮ್ಮು ಬರುವುದು, ವ್ಯಥೆಯಾಗುವುದು)

ತರುಣಿ:— (ಕಳಕಳಿಯಿಂದ) ನನ್ನ ಹಾಗೆ ಎಷ್ಟು ಮಂದೀನ್ನ ಗೋಳಿಗೀಡು ಮಾಡಿರುವಿರೊ ಏನೊ-ಮುಪ್ಪಿನಿಂದ ಇಷ್ಟು ಕಷ್ಟ ಬಡಲಿಕ್ಕೆ?

ಮುದುಕ:— (ಇಳಿದನಿಯಲ್ಲಿ) ಮುಪ್ಪಿನಿಂದ? ಯಾರಿಗೆ ಬಂದಿದೆ ಮುಪ್ಪು? ಮೊನ್ನೆ ಮೊನ್ನೆ ನನಗೊಂದು ವಿಚಾರಣಾ ಸಮಿತಿ (Enquiry Committee) ಯ ಸದಸ್ಯನಾಗಲಿಕ್ಕೆ ಕೇಳಿಕೊಂಡಿದ್ದರು. ನಾನೂ ಒಪ್ಪಿಕೊಂಡೀನಿ.

ತರುಣಿ.— (ತಿಳಿಯದೆ) ಏನು ಸಮಿತಿಯೊ ಏನು ಸಂಸ್ಥೆಯೊ? ಕೆಲಸ ಸಿಕ್ಕಿದ್ದರೆ ನಿಮ್ಮ ಮೊಮ್ಮಕ್ಕಳಿಗೆ ಪೆನ್‌ಶನ್ ಆಗೋ ಕಾಲ!

ಮುದುಕ:— (ಉಬ್ಬಿ ಸಂತಸದಿಂದ) ಹಹ! ನೋಡಿದಿಯಿಲ್ಲೊ? ಕೆಲಸ ಸಿಕ್ಕಿದ್ದರೆ — ? — ರೆ? ಆದರೆ ನಮ್ಮಂತಹ ಅನುಭವಿಕರು ಇರುವಾಗ ಹುಡುಗರಿಗೆ ಕೆಲಸ ಸಿಕ್ಕೋದು ಹೇಗೆ?

ತರುಣಿ:— (ಸಿಟ್ಟಿನಿಂದ) ಹಾಳಾಯಿತು ನಿಮ್ಮ ಅನುಭವ! ನಿಮ್ಮ ಮದುವೆ ಮಾಡಿಕೊಳ್ಳೊ ಅನುಭವದ ಯೋಗ್ಯತಾದಿಂದಲೆ ನನ್ನನ್ನು ಮದಿವೆಯಾದಿರೊ ಏನೋ? ನನಗ ಬಂದ ಸ್ಥಿತೀನೇ ನಿಮ್ಮ ಅನುಭವದ ಎಲ್ಲಾ ಕೆಲಸಕ್ಕೂ ಬಂದರೆ ದೇವರೇ ನೋಡಿಕೋಬೇಕು.

ಮುದುಕ:— ಮತ್ತೆ ನೀನು ಜಗಳ ಹೂಡಿದೆಯಾ? ಪ್ರತಿಯೊಂದು ಸಲ ಹೀಗೇ ಮಾಡುವೆ. ಈ ಸಲ ನಿನಗೆ ನಿಶ್ಚಯದಿಂದ ಬಂಗಾರದ ಡಾಬು ಮಾಡಿಸಿಕೊಡತೀನಿ, ಆಯಿತಿಲ್ಲೊ?

ತರುಣಿ:— ಸುಟ್ಟಿತು ನಿಮ್ಮ ಡಾಬು! ಜೀವಂತ ಇರುವಾಗ ಬರಿಯ ಮಾತಾಯ್ತು, ಇನ್ನು ಸತ್ತ ಮೇಲೆ ಮಾಡಿಸುವವರು ಇವರು? ಹೀಗೆ ಮುಂದಿಗೆ ಆಶೆ ಹಚ್ಚಿ ಕೆಲಸ ಮಾಡಿಸಿಕೊಳ್ಳೋದೇ ನಿಮ್ಮ ಅನುಭವ ಕಾಣಿಸತದೆ. ನಮ್ಮ ತಂದೆಗೆ ದುಡ್ಡಿನ ಆಶೆ ಹಚ್ಚಿ—

ಮುದುಕ:— (ಸಿಟ್ಟಿನ ದನಿಯಲ್ಲಿ) ಹಾಂ! ಹಾಂ! ಸಾಕಿನ್ನು ನೀನು ತಿರುಗಿ ವಾದಿಸೋದು! ಹೋಗು - ನನಗೆ ಆಫೀಸಿಗೆ ಹೋಗಬೇಕಾಗಿದೆ, ಬೂಟ್ಸ ತಕ್ಕೊಂಡು ಬಾ.

ತರುಣಿ:— (ಹಟದಿಂದ) ನಾನು ಸತ್ತೀನಿ ಅಂತ ಹೇಳಿದೆ, ತಿಳಿಯಲಿಲ್ಲೇನು ನಿಮಗೆ?

ಮುದುಕ:— (ವಿಚಾರ ಗೊಂದಲದಲ್ಲಿ ಸಿಲುಕಿ) ಸತ್ತೀದಿ-ಅಂದರೆ ?

ತರುಣ:— (ಹೆಮ್ಮೆಯಿಂದ) ನಿಮ್ಮ ಕೈಯೊಳಗಿಂದ ಪಾರಾಗೀನಿ ಅಂತ !

ಮುದುಕ:— (ಗೊಂದಲ ಹೆಚ್ಚಾಗಿ) ಅಂದರೆ? ಅಂದರೆ? ನನ್ನ ಕೆಲಸ ಯಾರು ಮಾಡಬೇಕು ? ನನ್ನ ಸೇವಾ ಯಾರು ಮಾಡಬೇಕು ?

ತರುಣ:— ಕೇಳಿಕೊಳ್ಳಿರಿ ನಿಮ್ಮ ಅನುಭವಕ್ಕೆ— ನಿಮ್ಮ ಆಫೀಸಿಗೆ! ಈಗ- ಸದ್ಯಕ್ಕೆ-ನನ್ನ ಸೇವಾ ನೀನೇ ಮಾಡಬೇಕು.... ನನಗೊಂದು ಗುಟುಕು ನೀರು ಕೊಡಬೇಕು.

ಮುದುಕ:— (ಚಕಿತನಾಗಿ) 'ನೀ'! ನೀರು! ನಿನಗೆ ಕೊಡಬೇಕೆ **ನಾನು** ?.... ಯಾಕೆ? .... ಬುದ್ಧಿಭ್ರಂಶ ಆಗಿದೆಯೊ ನಿನಗೆ, ಏನು ಜೀವ ಬೇಡಾಗಿ ದೆಯೊ ?

ತರುಣ:— (ಕಸಿಕರ ತೋರಿಸುತ್ತ) ಅಯ್ಯೊ ! ಪಾಪ ! ಈ ಮುದುಕನಿಗೆ ಬುದ್ಧಿ ಭ್ರಂಶಾನೂ ಆಗಿದೆ.... 'ಜೀವ ಬೇಡಾಗಿದೆ ಏನು' ಅಂತ ನನಗೇ ಕೇಳ್ತಾನೆ! ಇಷ್ಟರೊಳಗೇ ನಾನು ಸತ್ತದ್ದೂ ಮರೆತು ಹೋಯಿತೆ ? .... (ಅಧಿಕಾರದ ದನಿಯಲ್ಲಿ) ಆದರೆ ಮರೆತರೂ ಬಿಡುವಂತಿಲ್ಲ .... ಯಾಕಂದರೆ, ಈ ದಿನ ನನ್ನ ಶ್ರಾದ್ಧ—

ಮುದುಕ:— (ದೈನ್ಯದಿಂದ) ನನಗ ಆಫೀಸಿಗೆ ಹೋಗಬೇಕಾಗಿದೆ — ಮೀಟಿಂ ಗಿಗೆ ಹೋಗಬೇಕಾಗಿದೆ—ಅಯ್ಯೊ! ಎಲ್ಲಿಯೊ ಹೋಗಬೇಕಾಗಿ ದೆಯೆ ನನಗೆ?.... ನಾನು ಹೋಗಲೇ ಬೇಕು.

ತರುಣ:— ನನಗೂ ನನ್ನ ಆಫೀಸಿಗೆ ಹೋಗಬೇಕಾಗಿದೆ— ಬಹಳೊತ್ತು ರಜೆ ಇಲ್ಲ— ನೀರು ಕೊಡುವಿರೊ— ಇಲ್ಲ ಇಲ್ಲಿಂದಲೇ ಹಾರಿ ಹೋಗಿ ಪೋಲೀಸರಿಗೆ ಹೇಳಲಿಯೊ ನಾನು ಬಾವಿ ಬಿದ್ದು ಜೀವ ಯಾಕೆ ಕೊಟ್ಟೆ ಅಂತ ?

ಮುದುಕ:— (ಕೈಮುಗಿದು ಬೇಡುತ್ತ) ಇದು ನೋಡೆ— ಅಷ್ಟು ಮಾತ್ರ ಮಾಡ ಬೇಡ.... ನೀನು ಎಲ್ಲರ ಹಾಗೆ ಸತ್ತಿರುವೆ ಅಂತ ಸಾಧಿಸಿಕೊಳ್ಳಲಿಕ್ಕೆ ನಿನ್ನ ಹೆಸರಿನಿಂದ ಇಳಿಸಿದ ಅರ್ಘ ವಿಮಾಹಣ ಕೊಡಬೇಕಾ ಯಿತು.... ಇಲ್ಲಿ ನೋಡು.... ಇಲ್ಲಿಂದಲೆ ಹಾರಿ ಹೋಗೋದು ಅಂದೆ

ಯಲ್ಲ? ಸತ್ತದ್ದೆ ನಿಜ ಆದರೆ ಒಂದು ನಿಮಿಷದೊಳಗೆ ಹಾರಿ ಸುತ್ತಾಡಿ ಎಲ್ಲಿ ಜನ ನನ್ನ ದಾರಿ ಕಾಯುತಾ ಕೂತಾರೆ ಅಂತ ತಿಳುಹಿಸ ಬಾರದೆ?.... ನೋಡು, ಅಷ್ಟು ಉಪಕಾರ ಮಾಡಿದರೆ ಒಳ್ಳೇ ಥಾಟದ ಶ್ರಾದ್ಧ ಮಾಡತೀನಿ.... (ದಣಿದವನಂತೆ) ಅಯ್ಯೋ! ಏನು ನನ್ನ ಗತಿ? ಎಲ್ಲಿ ನಾನು ಹೋಗಲಿ? ಮೀಟಿಂಗಿಗೋ— ಆಫೀಸಿಗೋ? (ಎಂದು ತಲೆ ಹಿಡಿದುಕೊಂಡು ಕಣ್ಮುಚ್ಚಿ ಕುಳಿತುಕೊಳ್ಳುವನು.)

[ತರುಣಿ ತನ್ನ ಬಲಕ್ಕೆ ಏನನ್ನೋ ದಿಟ್ಟಿಸುವಂತೆ ಮಾಡುವಳು. ಕ್ರಮೇಣ ಅಲ್ಲಿ ಯುವಕನ ಮೂರ್ತಿಯೊಂದು ಕಾಣುವುದು.]

ಯುವಕ:— ಮುದಕಪ್ಪಾ, ಇನ್ನೂ ಆಫೀಸಿಗೆ ಹೋಗಿಲ್ಲವೆ?

[ತರುಣಿ 'ಸದ್ದು ಬೇಡ' ಎಂದು ಸನ್ನೆಯಿಂದ ಹೇಳುವಳು. ಯುವಕನು ಮೆಲ್ಲಗೆ ನಡೆದು ಬಂದು ಮೇಜು-ಬುಕ್‌ಸ್ಟ್ಯಾಂಡಗಳ ನಡುವೆ ನಿಂತು, ಮುದುಕನನ್ನು ದೃಷ್ಟಿಯಿಂದುದ್ದೇಶಿಸಿ, ಮುಗುಳ್ನಗೆಯಿಂದ ತರುಣಿಯನ್ನು ನೋಡಿ—]

ಯುವಕ:— ಮುದುಕಪ್ಪ, ಇನ್ನೂ ಆಫೀಸಿಗೆ ಹೋಗಲಿಲ್ಲವೆ?

ಮುದುಕ:— (ಮುಖವನ್ನು ಮೇಲಕ್ಕೆತ್ತಿ ಲಗಬಗೆಯಿಂದ) ಹೋಗುವೆ-ಹೊರಟೆ (ಎಂದು ಏಳಬೇಕೆನ್ನುವಷ್ಟರಲ್ಲಿ ಮತ್ತೆ ವೇದನೆಯಿಂದ ನರಳುವನು).

ಯುವಕ:— (ಕನಿಕರ ತೋರಿಸಿ) ಅಯ್ಯೋ, ಪಾಪ! ಮನಸ್ಸು ಮುಂದರಿದರೂ ಕಾಲು ಕಿತ್ತೋದಿಲ್ಲ, ಅಲ್ಲವೆ?

ತರುಣಿ:— ಕಾಲೊಳಗೆ ಅದೇನೊ ಬೂಟು ಬೇಕಾಗಿವೆಯಂತೆ. (ಎಂದು ಅದೃಶ್ಯಳಾಗುವಳು.)

ಯುವಕ:— ಯಾರ ಕಾಲೊಳಗಿನವು?

ಮುದುಕ:— (ಯುವಕನನ್ನು ದಿಟ್ಟಿಸಿ) ಉದ್ಧಟ! ಯಾರೊ ನೀನು?

ಯುವಕ:— ನಿನ್ನ ಪ್ರಾಚೀನಕರ್ಮ ನಾನು, ಮುತ್ತಾತಾ. ನಿನ್ನ ಅನುಭವದ ಭೂತ ನಾನು. (ಹತ್ತಿರ ನಡೆದು ಬಂದು) ನೋಡು, ನನ್ನ ಪರಿಚಯ ಸಿಕ್ಕಿತೆ? ಇಪ್ಪತ್ತು ವರ್ಷಗಳ ಹಿಂದಿನ ಮಾತು. ನೀನು ಭೂಮಿಯಲ್ಲಿ ಉಳಿದು ಮುದುಕನಾಗಿರುವೆ, ನಾನು ಜೀವವನ್ನು ಬಿಟ್ಟು ತರುಣನಾಗಿಯೆ ಉಳಿದಿರುವೆ. ಪಾಪ! ಕಣ್ಣು ಕಾಣುವಂತಿಲ್ಲ!

ಮುದುಕ:— (ಚಕಿತನಾಗಿ) ಯಾರು — ಯಾರು ನೀನು? ನಿನ್ನ ದನಿಯ ಪರಿಚಯವಿದೆ ನನಗೆ.

ಯುವಕ:— ಆಹಾ! ಇದೀಗ ಸರಿಯಾದ ಮಾತು. ನನ್ನ ದನಿಯು ಪರಿಚಯವಿದೆಯಂತೆ! ಮುದುಕನಾದ ಮೇಲೆ ಕೇಳಿಸುವುದಲ್ಲವೆ ನಿನಗೆ? ಆಗ—ಇಪ್ಪತ್ತು ವರ್ಷಗಳ ಮುಂಚೆ—ಗಟ್ಟಿಗನಿರುವಾಗ ಕೇಳಿಸಲಿಲ್ಲ ನಿನಗೆ, ಅಲ್ಲವೆ? ಅಂದು ಬೇಡಿಕೊಂಡೆ, ಕೂಗಿದೆ, ಹಲುಬಿದೆ— ನಿನಗೆ ಕೇಳಿಸಲಿಲ್ಲ.

ಮುದುಕ:— ನಿನಗೆ ಬೇಕಾದುದೇನು? ನನಗೆ ಆಫೀಸಿಗೆ ಹೋಗುವ ಅವಸರವಿದೆ, ಈಗ ಕಾಡಬೇಡ.

ಯುವಕ:— (ತಿರಸ್ಕಾರದಿಂದ) ಆಫೀಸಿನ ಅವಸರವಿಲ್ಲ, ಆಫೀಸಿನ ಭ್ರಾಂತಿ ಇದೆ ನಿನಗೆ!....ನನಗೆ ಬೇಕಾದುದೇನು?....ಇಂದು ನನಗೆ ಏನೂ ಬೇಕಿಲ್ಲ, ಪಿತಾಮಹಾ, ಕೇವಲ ನೀನು ಆಫೀಸಿಗೆ ಹೋಗುವುದನ್ನು ಕಣ್ಣಾರೆ ನೋಡಬೇಕಾಗಿದೆ....ನಾನೇ ಹೋಗಬೇಕಾಗಿತ್ತು ಆ ಆಫೀಸಿಗೆ....ಹೋಗುವಾಗ ಕಾಲಿಗೆ ತೊಡಕು ಹಾಕಿ ಮುಗ್ಗರಿಸುವಂತೆ ಮಾಡಿದೆ ನನ್ನನ್ನು!....ಅಂದೇ ನನ್ನ ಪ್ರಾಣ ಹೋದಂತಾಯಿತು....ಮುಂದೆ ಪ್ರಾಣ ಹೋದಂದಿನಿಂದ ನಿನ್ನನ್ನೆ ಕಾದುಕೊಂಡೆ ನಿಂತಿರುವೆ....

ಮುದುಕ:— (ಅರ್ಧ ತನ್ನಷ್ಟಕ್ಕೆ) ನನಗೆ ಭ್ರಾಂತಿ! ನಾನು ಪಿತಾಮಹ!.. ಆಫೀಸು!.... ಮೀಟಿಂಗು!.... ಅಯ್ಯೋ! ಈ ಗೊಂದಲವನ್ನು ತಪ್ಪಿಸಲಿಕ್ಕಾದರೂ ಸಾಯಬಾರದೆ ನಾನು? (ಕಣ್ಮುಚ್ಚುವನು ಕೈಗಳಿಂದ)

ಯುವಕ:— ಮುತ್ತಾತಾ, ನಿನಗೆ ಜಾಗೆ ಇಲ್ಲ; no vacancy! ಇಹಲೋಕದಲ್ಲಿ no vacancy ಎಂದು ನನಗೆ ಹೇಳಿದ್ದಿಯಲ್ಲವೆ?.... ಈಗ ಪರಲೋಕದಲ್ಲಿ ನಿನಗೆ no vacancy ....

ಮುದುಕ:— (ಕಣ್ತೊರಿಸಿಕೊಂಡು ಅವನನ್ನು ದಿಟ್ಟಿಸುತ್ತ) ಪರಲೋಕ! (ಹೆದರುತ್ತ) ಪರಲೋಕ? ಒಲ್ಲೆ, ಒಲ್ಲೆ, ನನಗೆ ಪರಲೋಕ ಬೇಡ! ನನಗೆ—(ಒಮ್ಮೆಲೆ ತಡೆದು) ವಂಚಕ! ಕಿಡಿಗೇಡಿ! ಮುದುಕನೆಂದು ತಿಳಿದು ನನ್ನ ಕೀಟಲೆ ಮಾಡಲು ಬಂದಿರುವೆಯಾ? ಯಾರಲ್ಲಿ?

ಹುಸೇನಿ ಇಬ್ರಾಹಿಂ-ಫೋಕ್ರಾ-ಫ್ಯಾನ್– (ಯುವಕನು ಗಟ್ಟಿಯಾಗಿ ನಗಲು) ನಗುವೆಯಾ? ನನ್ನ ಅಪಹಾಸ ಮಾಡುವೆಯಾ? ನಾನು ಯಾರೆಂದು ತಿಳಿದಿರುವೆ?

ಯುವಕ:— (ನಗೆ ತಡೆದು, ಕೈಮುಗಿದು, ಕಣ್ಮುಚ್ಚಿ) ಮಹಾನುಭಾವಾ, ಮುದಿರಾಯಾ, may your tribe increase! (ಕಣ್ತೆರೆದು, ದಿಟ್ಟಿಸಿ, ಕನಿಕರದಿಂದ) ಪಾಪ! ನನ್ನನ್ನು ಹೆದರಿಸಬೇಕೆಂಬ ಮುದಿಹುಚ್ಚು! .... ಹ ಹ! .... ಅನಂತನಾರೀನಾರಾಯಣಾ, ಬವಲೀ ಬಾದರಾಯಣಾ, ನನಗೆ ಯಾರ ಹೆದರಿಕೆಯೂ ಇಲ್ಲ! ನಾನು ಭೂತ! ಪಿಶಾಚಿ! ದೆವ್ವನಿರುವೆ ನಾನು!

ಮುದುಕ:— (ಚಕಿತನಾಗಿ) ಭೂತ! ದೆವ್ವ! ಪಿಶಾಚಿ!

ಯುವಕ:— (ತಲೆದೂಗುತ್ತ) ಅದೇ ನಾನು ಹೇಳಿದ್ದು. ಇರುವಾಗ ನನ್ನ ಹಂಬಲ ಕೇಳಿಸದ ನಿನಗೆ, ಸತ್ತ ನನ್ನ ಒಂದೊಂದು ಶಬ್ದವೂ ಕೇಳಿಸುವುದಲ್ಲವೆ? ಇರುವಾಗ ನನ್ನಿಂದ ಸೇವೆ ದೊರೆಯಲಿಲ್ಲ ನಿನಗೆ, ನಾನು ಸತ್ತಮೇಲೆ ದೊರಕಿಸಿಕೊಂಡಿರುವಿ, ನೆನಪಿದೆಯೆ? ಮ್ಯುನಿಸಿಪಾಲಿಟಿ ಚುನಾವಣೆಯಲ್ಲಿ ಸತ್ತ ನನ್ನ ವೋಟನ್ನು ಹಾಕಿಸಿಕೊಂಡು ನನಗೆ ಪುನರ್ಜನ್ಮವನ್ನು ಕೊಟ್ಟ ಪರಬ್ರಹ್ಮ ನೀನು....ಒಂದೇ ಒಂದು ವೋಟಿನಿಂದ ಆರಿಸಿ ಬಂದೆ ನೀನು—ಆ ವೋಟು ನನ್ನದು!

ಮುದುಕ:— (ತಲೆ ಜಾಡಿಸುತ್ತ) ಸುಳ್ಳು—ಸುಳ್ಳು! ನೀನು ಸತ್ತಿಲ್ಲ....ನಾನು ನಿಜವಾಗಿ ಆರಿಸಿಬಂದಿರುವೆ....ಬೇಕಾದರೆ ಇನ್ನೊಮ್ಮೆ ಮತಗಳನ್ನು ಎಣಿಸಲಿ—ಇನ್ನೊಮ್ಮೆ ಚುನಾವಣೆ ನಡೆಯಲಿ—

ಯುವಕ:— (ನಡುವೆಯೆ) ಮುದಿರಾಯಾ, ಸೈರಿಸುವಂತಹನಾಗು.... ಈಗ ನಡೆದಿದೆ ಇನ್ನೊಂದು ಚುನಾವಣೆ—ಪರಲೋಕದಲ್ಲಿ....ಇದೇ ಈಗ ನೀನು ಸಾಯಬೇಕು ಎಂದೆಯಲ್ಲ....ಅದಕಾಗಿ ಒಂದು ಯುಕ್ತಿಯನ್ನು ಹೇಳುವೆ....ಸದ್ಯಕ್ಕೆ ನಿನಗೆ ಆ ಲೋಕದಲ್ಲಿ ಜಾಗೆ ಇಲ್ಲ, ನನಗೆ ಈ ಲೋಕದಲ್ಲಿ ಜಾಗೆ ಇಲ್ಲ....ಈಗ ನೀನು ಸಾಯುವೆಯಂತೆ, ನಾನು ಬದುಕುವೆ. ನಮ್ಮಿಬ್ಬರ ಸ್ಥಾನಗಳನ್ನು ಪರಸ್ಪರ

ಬದಲಾಯಿಸಿಕೊಳ್ಳೋಣ....ನಿನ್ನ ಸ್ಥಾನ, ನಿನ್ನ ಮಾನ, ನಿನ್ನ ಮನೆ, ನಿನ್ನ ಹೆಂಡತಿ ಇವನ್ನು ನನಗೆ ಕೊಟ್ಟು ಬಿಡು——

ಮುದುಕ:—(ಕಿವಿ ಮುಚ್ಚಿಕೊಂಡು ಸಂತಾಪಾತಿರೇಕದಿಂದ) ಎಲಾ ಪಾಪಿ! ಚಾಂಡಾಲಾ! ದುಷ್—ಧು - (ಎಂದು ಉಸಿರು ಸಾಲದೆ ತಡೆಯುವನು)

ಯುವಕ:—(ಸಮಾಧಾನಗೊಳಿಸುತ್ತ) ಹಂ–ಕೂಗಬೇಡ.... ಉಸಿರು ಸಾಲದೆ ಪ್ರಾಣ ಹೋದೀತು! ಸಾಯುವ ಮುಂಚೆ ನಮ್ಮ ಎಕ್ಸ್‌ಚೇಂಜ ಕಾಂಟ್ರಾಕ್ಟಿಗೆ ಸಹಿ ಹಾಕು....

ಮುದುಕ:—(ಸಿಟ್ಟಿನಿಂದ ಹತಾಶನಾಗಿ) ಅಯ್ಯೋ ಏನು ಮಾಡಲಿ?

ಯುವಕ:—(ಬಾಯ್ದೆರೆದು ಬೇಡುವ ಹುಡುಗನಂತೆ) 'ಹುಂ' ಅಂದುಬಿಡು, ಅಜ್ಜ; ಹುಂ!

ಮುದುಕ:—(ತಲೆ ಹಿಡಿದುಕೊಳ್ಳುತ್ತ) ರಾಮಾ! ರಾಮಾ! ಏನಿದು? ನನ್ನ ಪಾಪದ ಮೂರ್ತಿಯೆ ನನ್ನೆದುರು ನಿಂತಿದೆಯೆ? (ಯುವಕನಿಗೆ, ಸಿಟ್ಟು ತಡೆಯದೆ) ಎಲೊ! ನಿಜವಾಗಿಯೆ ನೀನು ಪಿಶಾಚಿ! ಏನೆಂದು ತಿಳಿದಿರುವೆ? ನಾನೂ ನಿನ್ನಂತೆ ಅನಾಚಾರಿ ಎಂದು ತಿಳಿದಿರುವೆಯಾ?

ಯುವಕ:—(ಗಲ್ಲ ಬಡೆದುಕೊಳ್ಳುತ್ತ, ಸೋಗಿನ ನಮ್ರತೆಯಿಂದ) ಶಾಂತಂ ಪಾಪಂ! ಅಜ್ಜ, ನೀನು ಅನಾಚಾರಿಯೆ? ಶಾಂತಂ ಪಾಪಂ! ಸದಾಚಾರಿ ನೀನು, ಬ್ರಹ್ಮಚಾರಿ ನೀನು, ಭೀಷ್ಮಾಚಾರಿ ನೀನು! ತಿಳಿಯದ ತರುಣರಿಗಾಗಿ ಕನ್ಯೆಯರನ್ನು ಅಪಹರಿಸುವ ಭೀಷ್ಮನಂತೆ ನೀನೂ ನನ್ನಂತಹರಿಗಾಗಿ ಕನ್ಯೆಯರನ್ನು ಕಾದಿಟ್ಟಿರುವೆ; ಅದಕಾಗಿಯೆ ವಿಚಿತ್ರವೀರ್ಯನಾದ ನಾನು ಸಂಸಾರದ ಎಕ್ಸಚೇಂಜ್ ಬೇಡಿರುವೆ.... ಭೀಷ್ಮ! ....ಛೆ—ಭೀಷ್ಮನಿಗಿಂತಲೂ ಮೇಲು! ಹೆಂಗಸರಿಗೆ ಬೆನ್ನು ತೋರುವ ಭೀಷ್ಮನೆಲ್ಲಿ? ಬೆನ್ನೆ ಇಲ್ಲದೆ ಹೆಂಗಸರನ್ನು ಎದುರಿಸುವ ನೀನೆಲ್ಲಿ? ಪಿತಾಮಹಾ, ಪೆನ್‌ಶನ್‌ದ ಸ್ವಾಹಾ—

ಮುದುಕ:— ಅಯ್ಯೋ! (ಎಂದು ಚೀರುತ್ತ ಗಟ್ಟಿಯಾಗಿ ಕೈಗಳಿಂದ ಮುಖ ಮುಚ್ಚಿಕೊಳ್ಳುವನು.)

ಯುವಕ:—(ತಿರಸ್ಕಾರದಿಂದ) ಭೀಷ್ಮ!

[' ಆ ಭೀಷ್ಮನ ಶಿಖಂಡಿ ನಾನಿದ್ದೇನೆ, ಇಲ್ಲಿ ' ಎಂದು ನುಡಿಯುತ್ತ, ಯುವಕನ ಇದಿರು ಪಾಲೆಯಲ್ಲಿ ಮಧ್ಯವಯಸ್ಕಳಾದ ಹೆಂಗಸಿನ ಮೂರ್ತಿಯೊಂದು ಎದ್ದು ನಿಲ್ಲುವುದು. ಯುವಕನು ಚಕಿತನಾಗಿ ಅವಳನ್ನು ನೋಡುವನು. ಅವಳಾದರೂ ತಾಯ್ತನದ ಮುಗುಳ್ನಗೆಯಿಂದ ಅವನನ್ನು ನೋಡುತ್ತ ತಲೆದೂಗುವಳು; ಆ ಮೇಲೆ ಯುವಕನ ಕಡೆ ಕರುಣಾಪೂರಿತ ದೃಷ್ಟಿಯನ್ನು ಬೀರುತ್ತ —]

ಹೆಂಗಸು:— ಕೇಳಿದಿರಿಲ್ಲೊ ಹ್ಯಾಂಗ ಗೋಳಿಡ್ತಾನ ನಮ್ಮಪ್ಪ ಈಗ — ' ನನ್ನ ಹೆಂಡತಿ, ನನಗ ಹೆಂಡತಿ ಬೇಕೂಂ ' ತ? ಎರಡನೆಯ ಹೆಂಡತಿ ಸತ್ತು ಮೂರನೆಯ ಮದುವೆ ಮಾಡಿಕೋ ಮುಂಚೆ ನಾನು ಹೇಳಿದೆ-- ನನ್ನ ಕೂಡ ಎಷ್ಟು ಸಲಿಗೆ ಇತ್ತೂ ಅಂತೀರಿ? — ' ಮದಿವೆ ಮಾಡಿಕೋಬೇಡ. ನಿನ್ನ ವಯಸ್ಸಿಗೆ ಮದುವೆ-ಹೆಂಡತಿ ಮಾನಕ್ಕೂ ಸಾಲೋದಿಲ್ಲ, ಮನೆತನಕ್ಕೂ ನಡೆಯೋದಿಲ್ಲ, ಮುಪ್ಪಿಗಂತೂ ಆಧಾರೇ ಅಲ್ಲ ' ಅಂತ.... ಮೊದಲೇನೋ ' ಹುಂ ಹುಂ ' ಅಂದ, ನನ್ನ ಕಡೆ ಬರತಿದ್ದ ಹೋಗತಿದ್ದ, ನಾನೂ ಮನೆಯವನೇ ಅಂತ ನಡೆಸಿಕೊಂಡು ಇದ್ದೆ. ಕಡೆಗೆ ಅಂತೂ ಏನೊ ಒಂದು ಅಡಚಣಿ ಅಂತ ನನ್ನದೇ ಒಂದೆರಡು ಸಾವಿರ ದುಡ್ಡು ಒಯ್ದ; ಒಯ್ಯುವಲ್ಲನ್ಯಾಕ, ಇಂದಿಲ್ಲ ನಾಳೆ ನಾನು ಅವನೂ ಒಂದೇ ಅಂತ್ಮಾಡಿದ್ದೆ. ಅದರೆ ಎಂದೊ ಒಂದಿವಸ ಯಾವುದೊ ಒಂದು ಹುಡುಗೀನ್ನ ಮದುವೆ ಅಂತ ಮಾಡಿಕೊಂಡು ನನ್ನನ್ನ ತುಳಿದು--ತುಳಿದು ಯಾಕೆ?---ಅವನೇ ಆಧಾರ ಅಂತ ತಿಳಿದುಕೊಂಡಿದ್ದ ನನ್ನ ಮೈಮ್ಯಾಲಿನ ಹುಳದ ಹಾಂಗ ಜಾಡಿಸಿ ಹೋಗಿಬಿಟ್ಟ!

[ಯುವಕನು ಗಟ್ಟಿಯಾಗಿ ನಗುವನು]

ಹೆಂಗಸು:— ಸಾಕು ನಗುವಿರೇನು?

ಯುವಕ:— (ನಗೆ ತಡೆಯುತ್ತ) ಅಲ್ಲ—ಭೀಷ್ಮನ ಶಿಖಂಡಿ ಅನ್ನೋ ವಿಚಾರಕ್ಕೆ————

ಹೆಂಗಸು:— (ಅಪಮಾನಿತಳಾಗಿ) ಅವ ಭೀಷ್ಮ ಅಂತ ಹೇಳದಿರಿ ಅಂದ ಮ್ಯಾಲೆ–

ಯುವಕ:— (ಗಂಭೀರವಾಗಿ) ನೀನು ಶಿಖಂಡಿ ಅನ್ನೋ ಮಾತಿಗೆ ನನ್ನದು ಎಳ್ಳಷ್ಟಾದರೂ ವಿರೋಧವಿಲ್ಲ, ಜಗದಂಬೇ, ಅಲ್ಲ ' ಅಂಬೇ ', ಅಲ್ಲ

'ಅಂಬಿಕೇ' (ಒಮ್ಮೆಲೆ ಸಂಶಯದಿಂದ) ಏನು ಅಂಬಾಲಿಕಾನೋ (ಎನುತ್ತ ಕೈಮುಗಿದು ಮಾಯವಾಗುವನು)

ಮುದುಕ:— (ನರಳುತ್ತ) ಅಯ್ಯೊ! ನನಗೆ ಯಾರೂ ಗತಿ ಇಲ್ಲ!

ಹೆಂಗಸು:— (ನಡೆದು ಬಂದು, ಬೆನ್ನ ಮೇಲೆ ಕೈಯನಾಡಿಸುತ್ತ) ಯಾರೂ ಗತಿ ಇಲ್ಲೇನೆ ನನ್ನ ಮನಮೋಹನನಿಗೆ? ಏನು ಬೇಕಾಗಿದೆ ನನ್ನ ದೊರೆಗೆ?

ಮುದುಕ:— (ಮುಖ ತೆರೆದು ಅವಳನ್ನು ನೋಡಿ) ಯಾರು? ಯಾರು ನೀನು? (ಹೆದರಿಕೆಯಿಂದ ಗಟ್ಟಿಯಾಗಿ) ಸರಿ ದೂರ! ಇಲ್ಲಿ ಯಾಕೆ ಬಂದೆ?

ಹೆಂಗಸು:— (ಆಶ್ಚರ್ಯಚಕಿತಳಾದವಳಂತೆ) ಅಯ್ಯ! ಯಾವಾಗ ನೋಡಿದಾಗೂ ಬಿಂ ಅಂತ ಬಿಗಿದುಕೊಂಡೇ ಕೂತಿರತಾನಲ್ಲ? ಯಾರೂ ಗತಿ ಇಲ್ಲ ಅಂತ ಗೋಳಿಡತಿದ್ದಿ, ಅದನ್ನ ಕೇಳಿ ಬಂದರೆ———

ಮುದುಕ:— (ನಡುವೆಯೆ) ರಾಮಾ! ರಾಮಾ! ಯಾವ ಹಾಳು ಕುಲದ ಡಾಕಿನಿ ಇದು ನನಗೆ ಗಂಟು ಬಿದ್ದಿತು?

ಹೆಂಗಸು:— (ತಟ್ಟನೆ ದೂರ ಸಂದು ಅಭಿಮಾನದಿಂದ) ಡಾಕಿನಿ! ಯಾಕೊ, ನಮ್ಮಪ್ಪ? ನಾನು ಡಾಕಿನಿ ಅಂತೇ ಮನೆಯೊಳಗಿನ ಮೋಹಿನೀನ್ನ ಬಿಟ್ಟು ನನ್ನ ಕೂಡ ಇರತಿದ್ದೆಯಲ್ಲ? ಎಷ್ಟು ಚಂದ ಚಂದ ಮಾತು ಹೇಳತಿದ್ದೆಯಲ್ಲೊ, ನನ್ನ ಚಂದಪ್ಪ! 'ತಿಳಿದು ಪ್ರೀತಿ ಇಟ್ಟದ್ದು ಅಂದರೆ ನಿನ್ನಲ್ಲೇ ನೋಡು. ನೀನು ನನ್ನ ಬುದ್ಧಿಯ ಹೆಂಡತಿ, ಮನೆಯೊಳಗಿನದು ಅಂದರೆ ಕಟ್ಟಿಕೊಂಡ ಗುದ್ದೀ-ಹೆಂಡತಿ' ಅಂತ! ಇದ್ದ ಎರಡು ಮಕ್ಕಳು ನಿನ್ನ ದೊಡ್ಡತನ ಕಾಯಬೇಕು ಅಂತ ಅಪ್ಪನ ಹೆಸರ ಹೇಳದೇ ಸತ್ತು ಹೋದುವು! ಅಂದರೂ ನಾನು 'ಕುಂಯ್' ಅನ್ನಲಿಲ್ಲ. ಸತ್ತ ಮೇಲೂ ನಿನ್ನ ಮನೆಯ ಹಿತ್ತಲದೊಳಗಿನ ಹುಣಸೇಮರದೊಳಗೇ ಇದ್ದೀನಲ್ಲದೆ ಮತ್ತೊಬ್ಬನ್ನ ಕಣ್ಣೆತ್ತಿ ನೋಡಲಿಲ್ಲ, ಕೈಮಾಡಿ ಕರೆಯಲಿಲ್ಲ. ಇದ್ದಾಗ, ನಾಲ್ಕು ಮಂದಿಯೊಳಗ ನನ್ನ ಗುರುತು ಹಿಡಿಯಲಾರದ ಹಾಗ ಮಾಡತಿದ್ದೆ. ಈಗ ಸತ್ತು ಬಂದೀನಿ————

ಮುದುಕ:— (ನಡುವೆಯೆ ಆಶಾಯುಕ್ತ ದನಿಯಿಂದ) ಸತ್ತಿರುವೆಯಾ? ನಿಜವಾಗಿ ಸತ್ತಿರುವೆಯಾ?

ಹೆಂಗಸು:— ದೆವ್ವಿನಾಣೆ, ನಮ್ಮಪ್ಪ! ಸತ್ತುಹೋಗೀನಿ.

ಮುದುಕ:—(ಒಮ್ಮೆಲೆ ಯೋಜನೆಯಲ್ಲಿ ಸಿಕ್ಕಿಕೊಂಡು) ಇವಳೂ ಸತ್ತಿರುವಳಂತೆ! ಸತ್ತಿದ್ದರೆ ನನ್ನ ಮನೆಯಲ್ಲಿ ಯಾಕೆ? ನನ್ನ ಮನೆ ಎಂದರೆ ಸ್ಮಶಾನವೆ? (ನೋಡುವುದರಲ್ಲಿ ಹೆಂಗಸು ಮಾಯವಾಗಿರಲು) ಅಹುದು— ಇದು ಸ್ಮಶಾನ ! ಅದಕ್ಕೆಂದೇ ಭೂತ-ಪಿಶಾಚಿ-ಡಾಕಿನಿಗಳು ಮಿಂಚಿ ಸುಳಿದಾಡುತ್ತಿವೆ! ಬೇಡ— ಈ ಮನೆ ಬೇಡ! (ಏಳಲು ಯತ್ನಿಸಿ) ಇದೇನು? ನನ್ನ ಕಾಲ್ಗಳೇ ಏಳಲೊಲ್ಲವು! ನನಗೆ ಹೆದರಿಕೆಯಾಗತೊಡಗಿದೆ! ಕಾಲು! ಕಾಲು! (ಎಂದು ಕುಳಿತಲ್ಲಿಯೆ ಚಡಪಡಿಸುವನು).

[‘ ಕಾಲು ! ಕಾಲು ! ’ ಎಂದು ಅಣಕಿಸುತ್ತ ತರುಣಿ ಮೊದಲಿನ ಸ್ಥಳದಲ್ಲಿ ಕಾಣಿಸುವಳು]

ತರುಣಿ:— (ಅಣಕಿನ ದನಿಯಲ್ಲಿಯೆ) ಆಹಾ! ಓಡಿ ಹೋಗಬೇಕೆಂದಿದ್ದೆಯಾ? ನನ್ನ ಅನ್ನನೀರನ್ನು ತಪ್ಪಿಸಬೇಕೆಂದಿದ್ದೆಯಾ?

ಮುದುಕ:— (ಹತಾಶನಂತೆ) ಯಾರದು? (ನೋಡಿ, ಸಂಶಯದಿಂದ) ನನ್ನ ಹೆಂಡತಿ ?

[‘ ಅಲ್ಲ ’ ಎನ್ನುತ್ತ ಯುವಕನು ಕಾಣಿಸುವನು]

ಯುವಕ:— ಅಲ್ಲ.... ಆಕೆ ನನ್ನ ಹೆಂಡತಿ....

ಮುದುಕ:— (ಏನೂ ತಿಳಿಯದೆ) ನಿನ್ನ ಹೆಂಡತಿ! ಹಾಗಾದರೆ — ನನ್ನ ಹೆಂಡತಿ———?

ತರುಣಿ:— ಸತ್ತಳು.

ಯುವಕ:— ಅದಕಾಗಿಯೆ ಹೇಳಿದೆ ನನ್ನ ಕೈಯಲ್ಲಿ ತಿಲೋದಕವನ್ನು ಬಿಡು ಎಂದು—

[‘ ತಿಲೋದಕದ ಸಮುದ್ರ- ಈ ಗೃಧ್ರ ’ ಎನುತ್ತ ಎಡಬದಿಗೆ ಮಧ್ಯವಯಸ್ಕದ ಗೃಹಸ್ಥನು ಕಾಣಿಸುವನು. ತರುಣಿಯೂ ಯುವಕನೂ ಚಕಿತರಾಗಿ ಆವನನ್ನು ನೋಡುವರು]

ಗೃಹಸ್ಥ:— ತಿಲೋದಕದ ಸಮುದ್ರ ಈ ಗೃಧ್ರ.... ಯಾಕೆಂದರೆ, ಎಷ್ಟು ಜನರ ಜೀವ ನುಂಗಿರುವನೊ! ಎಲ್ಲರ ಶ್ರಾದ್ಧ ಮಾಡಿಸುವ ಅಧಿಕಾರ ಇವನಿಗಿದೆ.... ಇಡಿಯ ಸಮಾಜಕ್ಕೆಯೆ ಪುರೋಹಿತನಿವ—

ಮುದುಕ:— (ಅಳುದನಿಯಲ್ಲಿ) ಅಯ್ಯೋ ! ಇದಾವ ಭೂತ ?

ತರುಣಿ:— ನನ್ನ ಗಂಟಲು ಬತ್ತಿದೆ, ಬೇಗ—ನೀರು

ಯುವಕ:— ನನ್ನ ಹೃದಯ ಬತ್ತಿದೆ, ಬೇಗ—ನೀರೆ—

ಗೃಹಸ್ಥ:— ನನ್ನ ಸಂಚಾರ ಬತ್ತಿದೆ, ಬೇಗ—ವ್ಯವಸ್ಥೆ—ಮಾಡೋಣ. (ಮುದುಕನಿಗೆ) ಅಹುದು ನಾನು ಭೂತ. ಆದರೆ ನಿನಗೆ ನಭೂತ ಅನುಭವ ಕೊಡಲು ಬಂದಿರುವೆ, ನಿನ್ನ ಶ್ರಾದ್ಧ ಮಾಡಲು ಬಂದಿರುವೆ—

ಮುದುಕ:— (ಕುಳಿತಲ್ಲಿಯೆ ಚೀರುತ್ತ) ಬೇಡ, ಬೇಡ, ಒಲ್ಲೆ - ನಾನಿನ್ನೂ ಸತ್ತಿಲ್ಲ !

ಗೃಹಸ್ಥ:— ಅದಕಾಗಿಯೆ ನಿನ್ನ ಶ್ರಾದ್ಧ. ಎಷ್ಟು ಜನರು ಜೀವದಿಂದಿರುವಾಗಲೆ ಅವರ ಶ್ರಾದ್ಧವನ್ನು ನೀನು ಮಾಡಿಲ್ಲ ?

ಮುದುಕ:— (ಗಾಬರಿಯಿಂದ ಚಡಪಡಿಸುತ್ತ) ಅಯ್ಯೋ ! ಅಯ್ಯೋ ! ನನಗೆ ಶ್ರಾದ್ಧ ಬೇಡ....ನಾನು ಸಾಯೋದಿಲ್ಲ....ನಾನು ಇರೋದೂ ಇಲ್ಲ- ಎಲ್ಲಿಯಾದರೂ ಹೋಗತೀನಿ—

[' ನನ್ನ ಕೂಡ ಬಾ ಅಂತ ಹೇಳಲಿಲ್ಲ ? ' ಎನ್ನುತ್ತ ಹೆಂಗಸು ಮತ್ತೆ ಕಾಣಿಸುವಳು.]

ಹೆಂಗಸು:— ಬರತೀಯಾ ನನ್ನ ಕೂಡ ಹುಣಸೇಮರಕ್ಕೆ ? (ಎಂದು ಹತ್ತಿರ ಬರಲು)

ಮುದುಕ:— (ಮುಖ ಮುಚ್ಚಿಕೊಳ್ಳುತ್ತ) ಯಾರು ನೀನು ? ನಿನ್ನ ಮುಖ ನೋಡಲಾರೆ (ಬೆನ್ನು ತಿರುವಲು)

ಯುವಕ:— (ಚಪ್ಪಾಳೆ ತಟ್ಟಿ) ನಿಜ....ಶಿಖಂಡಿಗಾಗಿ ಬೆನ್ನ ತಿರುಗಿಸಿದ !

ತರುಣಿ:— (ಹೆಂಗಸನ್ನು ನೋಡಿ) ನನಗೆ ಈ ಸವತಿ ಇದ್ದಾಳೆ ಅಂತ ಗೊತ್ತಿದ್ದರೆ ನಾನೆಲ್ಲಿ ಬಾವಿ ಬಿದ್ದು ಜೀವ ಕೊಡತಿದ್ದೆನೆ ?

ಗೃಹಸ್ಥ:— (ನಕ್ಕು) ಶಿಖಂಡಿ ! ಭೀಷ್ಮ ! ಹಹ ! ಮುದಿರಾಯಾ, ದೊಡ್ಡ ಸಂಸಾರದ ಪರಾಕ್ರಮ ನಿನ್ನದು ಅಂತ ಗೊತ್ತಿರಲಿಲ್ಲ ನನಗೆ ! ಹೀಗಿದ್ದರೆ— ವೈಭವದಿಂದ ಜರುಗಬೇಕು ನಿನ್ನ ಶ್ರಾದ್ಧ.

ಯುವಕ:— ಶಾಂತಂ ಪಾಪಂ ! ಅವನಿಗೆಲ್ಲಿಯ ಸಂಸಾರ ? ಕಲಿಯುಗದ

ಭೀಷ್ಮನವ! ಕೇಳಿದಿರಿಲ್ಲೊ ಅವನ ಪ್ರತಿಜ್ಞೆಯನ್ನು? ಅವನು ಸಾಯುವುದಿಲ್ಲವಂತೆ!

ಗೃಹಸ್ಥ:— ಸಾಯುವುದು ಯಾರಿಗೆ ಬೇಕಾಗಿದೆ? ಹಾಗೇ ಶ್ರಾದ್ಧ ಮಾಡ್ಹೋಣ

ಮುದುಕ:— (ಅಳುದನಿಯಲ್ಲಿ) ಇಲ್ಲ, ನಾನು ಸಾಯುವುದಿಲ್ಲ, ನನಗೆ ಶ್ರಾದ್ಧ ಬೇಡ....ದಯಮಾಡಿ ಬಿಟ್ಟು ಬಿಡಿರಿ ನನ್ನ....ನನಗೆ ಬಹಳ ಕೆಲಸಗಳಿವೆ....ಮೀಟಿಂಗಿಗೆ--ಏನು ಆಫೀಸಿಗೊ? — ಎಲ್ಲಿಯೊ ಹೋಗಬೇಕಾಗಿದೆ ನನಗೆ—

ಯುವಕ:— ಇಚ್ಛಾಮರಣಿ ನೀನು!

ಗೃಹಸ್ಥ:— ಅದಕಾಗಿ ಬಿಡುವಿದ್ದಾಗ, ಬೇಕಾದಾಗ, ಅನುಕೂಲ ನೋಡಿಕೊಂಡು ಸಾಯುವೆಯಂತೆ. ಸದ್ಯಕ್ಕೆ ಸಂಸಾರ ಯುದ್ಧಕ್ಕೆ ಬೇರೊಬ್ಬ ತರುಣ ಸೇನಾಪತಿ ಬೇಕಾಗಿದ್ದಾನೆ—ಆದ್ದರಿಂದ-ದಯವಿಟ್ಟು ಶರ-ಪಂಜರದಲ್ಲಿ ಮಲಗಿಕೊ.... (ಅವನ ಹತ್ತಿರ ಹೋಗುವನು).

ಹೆಂಗಸು:— (ಅರ್ಥ ತಿಳಿಯದೆ) ಮಲಗಿಕೋ ಅಂತಾರೆ, ಮಲಗಬಾರದೆ? ನನ್ನ ತೊಡಗೆ ತಲೆ ಇಟ್ಟು ಮಲಗುವೆಯೇನು?

ಮುದುಕ:— (ಭ್ರಮಿಷ್ಟನಂತೆ) ಆಫೀಸು! .... ಮೀಟಿಂಗ .... ಡೈರೆಕ್ಟರ್ಸ (ಒಮ್ಮೆಲೆ ನಿದ್ದೆಯಿಂದ ಎಚ್ಚೆತ್ತಂತೆ) ಯಾವ ಡೈರೆಕ್ಟರ್ಸ?

ಗೃಹಸ್ಥ:— (ಅವನ ಕೈಹಿಡಿಯುತ್ತ) ಶ್ರಾದ್ದದ ಡೈರೆಕ್ಟರ್ಸ————

ಯುವಕ— (ಮತ್ತೊಂದು ಬದಿಯಿಂದ ಕೈಹಿಡಿದು ಎಬ್ಬಿಸುತ್ತ) ಸುರುವಾಗಲಿ ಹಾಗಾದರೆ ಶೂಟಿಂಗ.....ಹಂ....ಮಂತ್ರ ಹೇಳುವೆ ನಾನು———
(ಇದು ನಡೆದಾಗ ಇಬ್ಬರೂ ಮುದುಕನನ್ನು ಮೆಲ್ಲಗೆ ಎಬ್ಬಿಸಿ ನಡೆಸುವರು. ಅವನು ಜೀವಕಳೆ ಇಲ್ಲದೆ ಗೊಂಬೆಯಂತೆ ನಡೆಸಿದತ್ತ ನಡೆಯುವನು).
ಶಯನಂ ಕಲ್ಪಯಾಮಾಸುಃ, ಹಂ—ಹಾಸಿಗೆ ಹಾಕಿರಿ— (ಹೆಂಗಸು ಒಂದು ಬಟ್ಟೆಯನ್ನು ಕೆಳಗೆ ಹಾಸಿ ಕುರ್ಚಿಯ ಮೇಲಿದ್ದ ಆಸನವನ್ನು ತಲೆದಿಂಬಿಗಿರಿಸುವಾಗ) ಕಾಲು ದಕ್ಷಿಣದ ಕಡೆ————

ಗೃಹಸ್ಥ:-- ಯಾಕೆಂದರೆ ದಕ್ಷಿಣೆಗಾಗಿ ಬಂದವರಿಗೆ ಕಾಲು ತೋರಿಸುತ್ತಿದ್ದ ಈತ—

ಯುವಕ:— ಭೀಷ್ಮಾಯ— ಕೆಳಗೆ ಹಾಕರಿ ಇವನ್ನ; ಅಮಿತ ಕರ್ಮಣೇ— ಬಹಳ ಕೆಲಸ ತನಗೆ ಅಂತ ಹೇಳುತ್ತಿದ್ದನಲ್ಲವೆ ? ಸೋಪಧಾನಂ— (ಹೆಂಗಸಿಗೆ) ತಲೆದಿಂಬು — ಅಪ್ಪ, ಶಿಖಂಡೀ— ಅಲ್ಲ, ಅಮ್ಮಾ, ಶಿಖಂಡೀ—ಏನು ಅಪ್ಪಮ್ಮಾನೊ ?.... ತಲೆದಿಂಬು (ಅವಳು ಸರಿಯಾಗಿ ಇರಿಸುವಳು) (ಮುದುಕನನ್ನು ಮಲಗಿಸುತ್ತ) ನರವ್ಯಾಘ್ರ—ಯಾಕೆಂದರೆ ಹುಲಿಯ ಹಾಗೆ ಮಂದಿಯ ಜೀವ ನುಂಗತಿದ್ದ.... ಶರೈಃ ಸನ್ನತ ಪರ್ವಭಿಃ (ಎನ್ನುತ್ತ ಮಲಗಿಸಿ ನಿಂತು ಕೈ ಜಾಡಿಸುತ್ತ) ಶರಾ ಬರೆಯಿರಿ ಅಂತ———

[ತೆರೆಯು ಕೆಳಗೆ ಬರುವುದು. ಆಗ ಮೇಲಿನ ಶ್ಲೋಕವನ್ನು ಪೂರ್ತಿಯಾಗಿ ಮತ್ತೊಮ್ಮೆ ನುಡಿಯಬೇಕು. ಮತ್ತೆ ತೆರೆ ಏಳುವುದು. ಮುದುಕ ಹಾಗೆಯೆ ಮಲಗಿದ್ದಾನೆ. ಬಲಬದಿಗೆ ತರುಣಿ, ಯುವಕ; ಎಡಬದಿಗೆ ಗೃಹಸ್ಥ, ಹೆಂಗಸು. ಮುದುಕನನ್ನು ಒಮ್ಮೆ ನೋಡಿ ಯುವಕನು ತರುಣಿಯ ಕೈಹಿಡಿದು ಹೋಗುವನು. ಇತ್ತ ಗೃಹಸ್ಥನು ನಗೆಮೊಗದಿಂದ ತಲೆಸನ್ನೆಯಿಂದ ಕರೆಯಲು ಹೆಂಗಸು ಅವನನ್ನು ಹಿಂಬಾಲಿಸಿ ಹೋಗುವಳು. ಒಂದರೆ ನಿಮಿಷ ಸದ್ದಿಲ್ಲದೆ ತಡೆದು --ಕೊನೆಗೆ ಸಾವಕಾಶವಾಗಿ ತೆರೆಯನ್ನು ಕೆಳಗಿಳಿಸಬೇಕು.]

ಮುಗಿದುದು.



ಕನ್ನಡದಲ್ಲಿ ಜ್ಞಾನಜಿಜ್ಞಾಸುಗಳಿಗೆ ಸುಗ್ಗಿ !

❊

ಸಾಹಿತ್ಯದ ಆನಂದ ಬಯಸುವವರಿಗೆ ವಸಂತಕಾಲ !!

೧ **ಬಾಳಿನ ಗುಟ್ಟು:** ಒಗೆತನವನ್ನು ಯಶಸ್ವಿಯಾಗಿ ಹೇಗೆ ಸಾಗಿಸಬೇಕೆಂಬ ಚಿಂತೆ ತಪ್ಪುವುದು, ಇದನ್ನೋದಿದರೆ.

೧—೧೨—೦

೨ **ಕರಟಕರಾಯ (ನರಿಕತೆ)** ಲೋಕದ ಮೋಸಗಾರರ ಗುಟ್ಟು ತಿಳಿಸುವ ಕತೆ. ೦—೧೨—೦

೩ **ದಾರಿಯ ಬುತ್ತಿ:** ಅಮೃತ ವಚನಗಳ ಸಂಗ್ರಹ. ಬಾಳಿನ ದಾರಿಕಾರರಿಗೆ ಇದು ಬೇಕೇಬೇಕು. ೦—೪—೬

೪ **ಯಶಸ್ಸು ಪಡೆವ ಬಗೆ:** ಮಹಾಬಲೇಶ್ವರ ಶ್ರೇಷ್ಠಿಗಳು. ಇದನ್ನು ಓದಿದರೆ ಉದ್ಯೋಗದಲ್ಲಿ ಯಶಸ್ವಿಯಾಗುವ ಹದ ತಿಳಿಯುವುದು.

ಹಾದಿಯ ಹೊತ್ತಿಗೆ

ಶ್ರೀರಂಗರ ರಂಗಭೂಮಿ

ಶ್ರೀರಂಗರ ಪ್ರಚೋದಕವಾದ ಜೀವಂತ ಶೈಲಿ ಮನವನ್ನು ಮುಟ್ಟಿ, ತಟ್ಟಿ, ಕುಟ್ಟಿ ಎಬ್ಬಿಸುವ ಹೊಸ ವಿಚಾರಗಳ ಪರಿಚಯವಿಲ್ಲದ ಸುಶಿಕ್ಷಿತ ಕನ್ನಡಿಗರೇ ವಿರಳ.

ಇವರ ಹೊಚ್ಚ ಹೊಸ ನಾಟಿಕೆಗಳು ೨ ಭಾಗಗಳಲ್ಲಿಬರಲಿವೆ.

ಮನೆ ಬೆಳಕು

ಶ್ರೀ ಕಾರಂತರ ಅಪೂರ್ವ ಗ್ರಂಥ

ಶ್ರೀಮಾನ್ ಕಾರಂತರು ಈ ವರೆಗಿನ ತಮ್ಮ ಅಭ್ಯಾಸ, ಅನುಭವಗಳ ಸಾರವನ್ನೇ ಇದರಲ್ಲಿ ಸಂಗ್ರಹಿಸಿದ್ದಾರೆ. ಬದುಕುವ ಬಗೆಯನ್ನು ಕುರಿತು ಬರೆದ ತುಂಬ ಹುರುಳುಳ್ಳ ಗ್ರಂಥ. ಗಂಭೀರ ವಿಚಾರ; ಪ್ರೌಢ ಶೈಲಿಯ ಒಂದು ಆದರ್ಶ ಗ್ರಂಥ.

ಇದನ್ನು ಬಯಸುವವರು ಮೊದಲೇ ತಿಳಿಸಿದರೆ ಅವರಿಗೆ ಅಂಚೆಯ ವೆಚ್ಚವಿಲ್ಲ. ಗ್ರಂಥವು ಮೂಲ ಬೆಲೆಗೆ ದೊರೆಯುವುದು. ೧--೮--೦

ಕನ್ನಡ ಸರಸ್ವತಿ ಭಾಂಡಾಗಾರ
— ಧಾರವಾಡ —

ಅಚ್ಚುಕೂಟ: ಕೇಳಕರ ಮುದ್ರಣಾಲಯ, ಧಾರವಾಡ.

ಮುದ್ರಕರು ಮತ್ತು ಪ್ರಕಾಶಕರು: } **ಜಿ. ಕೆ. ಕೇಳಕರ**